ಕರ್ನಾಟಕ ಸರ್ಕಾರ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.**

**ಸಂಖ್ಯೆ:** HFWS-ADM0CRCL/1/2024 (E-1229153) **ದಿನಾಂಕ:** 24 **.01.2024**

## ಸುತ್ತೋಲೆ

**ವಿಷಯ:** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ಅಧೀನ ಕಛೇರಿಗಳಿಂದ ಪ್ರಸ್ತಾವನೆ/ಟಪಾಲುಗಳನ್ನು ಇ-ತಂತ್ರಾಂಶದ ಮುಖಾಂತರ ಸಲ್ಲಿಸುವ ಬಗ್ಗೆ.

**ಉಲ್ಲೇಖ:** ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ:ಹೆಚ್.ಎಫ್.ಡಬ್ಲ್ಯೂಸಿಎಸ್/04/2016 ದಿನಾಂಕ:20.10.2023

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆಯನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದಲ್ಲಿ ಇ-ಕಛೇರಿ ತಂತ್ರಾಂಶದ ಮೂಲಕ ಕಡತಗಳ ನಿರ್ವಹಣೆಯಾಗುತ್ತಿದ್ದು,, ಪ್ರಸ್ತುತ ಅಧೀನ ಕಛೇರಿಗಳಿಂದ ಪ್ರಸ್ತಾವನೆ/ಟಪಾಲುಗಳು ಭೌತಿಕವಾಗಿ ಸ್ವೀಕೃತವಾಗುತ್ತಿರುವುದರಿಂದ ಇವುಗಳನ್ನು ನಿರ್ದೇಶನಾಲಯದಲ್ಲಿಯೇ ಸ್ಕ್ಯಾನ್ ಮಾಡಿ ಸಂಬಂಧಪಟ್ಟ ಸಂಕಲನಗಳಿಗೆ ರವಾನಿಸಿ, ಇ-ಕಛೇರಿಯ ಕಡತಗಳನ್ನು ನಿರ್ವಹಿಸಲು ಅನಾನುಕೂಲ ಹಾಗೂ ವಿಳಂಭವಾಗುತ್ತಿರುತ್ತದೆ.

ಆದ್ದರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ಅಧೀನ ಕಛೇರಿಗಳಲ್ಲಿ ಇ-ಕಛೇರಿ ಮೂಲಕ ನಿರ್ವಹಣೆ ಮಾಡುತ್ತಿದ್ದಲ್ಲಿ ನಿರ್ದೇಶನಾಲಯಕ್ಕೆ ಸಲ್ಲಿಸುವ ಎಲ್ಲಾ ಪ್ರಸ್ತಾವನೆ/ಟಪಾಲುಗಳನ್ನು ಕಡ್ಡಾಯವಾಗಿ ಇ-ತಂತ್ರಾಂಶದಲ್ಲಿ ದಾಖಲಿಸಿ, ಇ-ಕಛೇರಿ ಸಂಖ್ಯೆಯನ್ನು ನಮೂದು ಮಾಡಿರುವ ಭೌತಿಕ ಪ್ರಸ್ತಾವನೆ/ಟಪಾಲುಗಳನ್ನು ಮಾತ್ರ ಸಲ್ಲಿಸುವುದು. ಇ-ಕಛೇರಿ ತಂತ್ರಾಂಶ ಅಳವಡಿಸಿಕೊಳ್ಳದ ಅಧೀನ ಕಛೇರಿಯವರು, ಕಡ್ಡಾಯವಾಗಿ ಇ- ಕಚೇರಿಯ ತಂತ್ರಾಂಶವನ್ನು ದಿನಾಂಕ: 31.03.2024ರೊಳಗೇ ಅಳವಡಸಿಕೊಳ್ಳಲು ಕ್ರಮವಹಿಸುವುದು, ಅಲ್ಲಿಯವರೆವಿಗೂ ನಿರ್ದೇಶನಾಲಯಕ್ಕೆ ಸಲ್ಲಿಸುವ ಎಲ್ಲಾ ಭೌತಿಕ ಪ್ರಸ್ತಾವನೆ / ಟಪಾಲುಗಳನ್ನು ಕಡ್ಡಾಯವಾಗಿ ಸ್ಕ್ಯಾನ್ ಮಾಡಿ ಸಾಫ್ಟ್ ಪ್ರತಿಯನ್ನು e-Mail: tappaldhs@gmail.com ಇಲ್ಲಿಗೆ ತಪ್ಪದೇ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

24.1.24

ಆಯುಕ್ತರು
ಆರೋಗ್ಯ ಮತ್ತು ಕು.ಕ ಸೇವೆಗಳು
ಬೆಂಗಳೂರು

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1. ಎಲ್ಲಾ ವಿಭಾಗೀಯ ಜಂಟಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.
2. ರಾಜ್ಯದ ಎಲ್ಲಾ ಕಾರ್ಯಕ್ರಮಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.
3. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ____________ ಜಿಲ್ಲೆ
4. ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ____________________ ಜಿಲ್ಲೆ.
5. ಎಲ್ಲಾ, ವೈದ್ಯಕೀಯ ಅಧೀಕ್ಷಕರು, ಸಾರ್ವಜನಿಕ ಆಸ್ಪತ್ರೆ, ________________
6. ಎಲ್ಲಾ ಆಡಳಿತ ವೈದ್ಯಾಧಿಕಾರಿಗಳು, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ/ ಸಮುದಾಯ ಆರೋಗ್ಯ ಕೇಂದ್ರ/ ಪ್ರಾಥಮಿಕ ಆರೋಗ್ಯ ಕೇಂದ್ರ / ಇತರ ಆರೋಗ್ಯ ಸಂಸ್ಥೆಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು__________________ ಜಿಲ್ಲೆ.
7. ಡೀನ್ ಹಾಗೂ ನಿರ್ದೇಶಕರು,____________________________________________
8. ಇಲಾಖಾ ಅಧಿಕೃತ ವೆಬ್-ಸೈಟ್‌ನಲ್ಲಿ ಪ್ರಕಟಿಸುವ ಪ್ರತಿ.

Scanned with OKEN Scanner